KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಜೂನ್ ೧೭, ೨೦೧೦ (ಜ್ಯೇಷ್ಠ ೨೭, ಶಕ ವರ್ಷ ೧೯೩೨)	ಸಂಚಿಕೆ ೨೪

ಭಾಗ – ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ತಹಸೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಯಲಹಂಕ ಉಪನಗರ, ಬೆಂಗಳೂರು

ನಮೂನೆ–27

ಭೂ ಕಂದಾಯ ಅಧಿನಿಯಮ 68(1)ನೇ ಪ್ರಕರಣದ ಮೇರೆಗೆ ಘೋಷಣೆ

ಸಾರ್ವಜನಿಕ ಪ್ರಕಟಣೆ

ಸಂ: 94(ಸಿ): 09 : 06–07

ಈ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ 181, ಸರ್ಕಾರಿ ಖರಾಬು ಜಮೀನು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲ ಎಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ, ಗ್ರಾಮಠಾಣಾದಲ್ಲಿರುವ 94(ಸಿ) ರಡಿ ಸಕ್ರಮಕ್ಕೆ ಹಾಕಿರುವ ಸುಮಾರು – 12 – ಜನ ಅರ್ಜಿದಾರರುಗಳಿಗೆ ಸಕ್ರಮಗೊಳಿಸುವಲ್ಲಿ ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸ.ನಂ. 181 ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಅಥವಾ ಅದರ ಮೇಲಿನ ಸಾರ್ವಜನಿಕ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳುತ್ತವೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಈ ರೀತಿ ಸ.ನಂ. 181, ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಉದ್ದೇಶದಿಂದ ಖಾಯಂ ಆಗಿ ಮುಚ್ಚಲು ಉದ್ದೇಶಿಸಿದೆ. ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೆ ಒಳಗಾಗುವ ಯಾವುದೇ ಸಂಘ ಸಂಸ್ಥೆ ಈ ಅಧಿಸೂಚನೆಯನ್ನು ಹೊರಡಿಸಿದ 90 ದಿನಗಳ ಒಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮದ ರೀತಿಯನ್ನು ವಿವರದೊಂದಿಗೆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬರಹದಲ್ಲಿ ತಿಳಿಸತಕ್ಕದ್ದು.

ಅನುಸೂಚಿ

ಗ್ರಾಮ	:	ತರಹುಣಸೆ	**ಚಕ್ಕುಬಂದಿ**		
ಹೋಬಳಿ	:	ಜಾಲ	ಪೂರ್ವ	:	ಸರ್ವೆ ನಂ.184
ತಾಲ್ಲೂಕು	:	ಬೆಂಗಳೂರು ಉತ್ತರ (ಅಪರ)	ಪಶ್ಚಿಮ	:	ಸರ್ವೆ ನಂ.179, 180
ಜಿಲ್ಲೆ	:	ಬೆಂಗಳೂರು	ಉತ್ತರ	:	ಸರ್ವೆ ನಂ.180 ಮತ್ತು ಹಳ್ಳ
ಸರ್ವೆ ನಂಬರ್	:	181	ದಕ್ಷಿಣ	:	ಸರ್ವೆ ನಂ.183
ವಿಸ್ತೀರ್ಣ	:				

ತಹಸೀಲ್ದಾರ್
ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಯಲಹಂಕ, ಬೆಂಗಳೂರು

ಪಿ.ಆರ್. 192

VI-F1 -B/B

ನಗರಸಭಾ ಕಾರ್ಯಾಲಯ – ತಿಪಟೂರು

ಅಧಿಸೂಚನೆ

ಕ್ರಮಾಂಕ:ಸಿಬ್ಬಂದಿ(3)/ಸಿಆರ್/227/2007-08, ದಿನಾಂಕ: 12ನೇ ಮೇ 2010

ಕೇಂದ್ರ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 5(1)ರನ್ವಯ ತಿಪಟೂರು ನಗರಸಭಾ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಾಧಿಕಾರಗಳನ್ನು ಪುನರ್ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಕ್ರ. ಸಂ.	ಅಧಿಕಾರಿಗಳ ಮತ್ತು ಹುದ್ದೆ	ನಾಮ ನಿರ್ದೇಶನ ಹುದ್ದೆ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು ಹಾಗೂ ಹುದ್ದೆ	ಸಂಬಂಧಪಟ್ಟ ಶಾಖೆ
1	ಶ್ರೀ ಕೆ.ಎಸ್. ವೆಂಕಟರಾಮ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀ ಚನ್ನಕೇಶವ, ಕಿರಿಯ ಅಭಿಯಂತರರು	ಇಂಜನಿಯರಿಂಗ್ ವಿಭಾಗಕ್ಕೆ ಸಂಬಂಧಿಸಿದ ಮತ್ತು ಎಸ್.ಜೆ.ಎಸ್.ಆರ್.ವೈ. ಶಾಖೆಗೆ ಸಂಬಂಧಿಸಿದ ಕಾಮಗಾರಿಗಳ ಮಾಹಿತಿ ಮತ್ತು ಕಟ್ಟಡ ಪರವಾನಿಗೆ ನೀಡುವ ಸಂಬಂಧ ಒಳಪಡುವ ಮಾಹಿತಿಗಳನ್ನು ಒದಗಿಸುವುದು.
2	ಶ್ರೀಮತಿ ಕೆ.ಹೆಚ್. ಪುಟ್ಟಲಕ್ಷ್ಮಮ್ಮ, ವ್ಯವಸ್ಥಾಪಕರು, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀಮತಿ ಜಿ.ಎಂ. ನಾಗಲಕ್ಷ್ಮಿ, ಪ್ರಥಮ ದರ್ಜೆ ಸಹಾಯಕಿ	ಆಡಳಿತ ಶಾಖೆಯ ಮಾಹಿತಿಯನ್ನು ಒದಗಿಸಲು ನಿಯೋಜಿಸಲಾಗಿದೆ.
3	ಶ್ರೀ ಎಸ್.ಡಿ. ಬಸವೇಗೌಡ, ಲೆಕ್ಕಾಧೀಕ್ಷಕರು, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀಮತಿ ಡಿ. ವಿಜಯಲಕ್ಷ್ಮಿ, ಪ್ರಥಮದರ್ಜೆ ಸಹಾಯಕಿ, (ಒ.ಒ.ಡಿ ಅಕೌಂಟೆಂಟ್)	ಶೇ. 18ರ ವಿಭಾಗ ಮತ್ತು ಲೆಕ್ಕಪತ್ರ ಶಾಖೆಗೆ ಸಂಬಂಧಿಸಿದ ಎಲ್ಲಾ ಲೆಕ್ಕ ಪತ್ರ ಗಳನ್ನೊಳಗೊಂಡಂತೆ ಹಾಗೂ ನಗರಸಭೆಯ ದಾಸ್ತಾನು ಶಾಖೆಗೆ ಸಂಬಂಧಿಸಿದಂತೆ ಮಾಹಿತಿಗಳನ್ನು ಒದಗಿಸುವುದು.
4	ಶ್ರೀ ಬಿ.ಆರ್. ಈಶ್ವರಪ್ಪ, ಕಂದಾಯಾಧಿಕಾರಿ, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀ ಸಿ.ಎನ್. ಸುಬ್ಬಣ್ಣ, ಕಂದಾಯ ನಿರೀಕ್ಷಕರು	ಕಂದಾಯ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಒದಗಿಸಲು ನಿಯೋಜಿಸಿದೆ.
5	ಶ್ರೀ ಬಿ.ಎಸ್. ಯೋಗೀಶ್, ಪರಿಸರ ಅಭಿಯಂತರರು, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀ ಕೆ.ಬಿ. ತೀರ್ಥಪ್ರಸಾದ್, ಕಿರಿಯ ಆರೋಗ್ಯ ನಿರೀಕ್ಷಕರು	ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ಸಾಮಗ್ರಿಗಳ ಖರೀದಿ, ವಿತರಣೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಮತ್ತು ನಗರಸಭೆಯ ವಾಹನಗಳಿಗೆ ಸಂಬಂಧಿಸಿದ ಮಾಹಿತಿ ಮತ್ತು ನಗರದ ಸ್ವಚ್ಛತೆ ಮತ್ತು ಪರಿಸರ ಶಾಖೆಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು ಒದಗಿಸುವುದು.
6	ಶ್ರೀಮತಿ ಎಸ್.ಎಂ. ಮಹೇಶ್ವರಿ ಕಮ್ಯುನಿಟಿ ಅಫೇರ್ಸ್ ಆಫೀಸರ್, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀ ಪಿ.ಸಿ. ಬಸವರಾಜಯ್ಯ, ಸಮುದಾಯ ಸಂಘಟಕರು	ಎಸ್.ಜೆ.ಎಸ್.ಆರ್.ವೈ. ಶಾಖೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಒದಗಿಸುವುದು.
7	ಶ್ರೀ ಕೆ. ಗಣೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಎಂ.ಆರ್.ಪಿ. ಯೋಜನೆ, ನಗರಸಭೆ, ತಿಪಟೂರು	ಸಾರ್ವಜನಿಕ ಮಾಹಿತಿ ಅಧಿಕಾರಿ	ಶ್ರೀ ಕೆ.ಪಿ. ಶ್ರೀಧರ್, ಲೆಕ್ಕ ಅಧೀಕ್ಷಕರು, ಕೆ.ಎಂ.ಆರ್.ಪಿ. ಯೋಜನೆ, ನಗರಸಭೆ, ತಿಪಟೂರು	ಕೆ.ಎಂ.ಆರ್.ಪಿ. ಯೋಜನೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ಸಲ್ಲಿಸುವುದು.

ಪೌರಾಯುಕ್ತರು,
ನಗರಸಭೆ, ತಿಪಟೂರು

ನಗರಸಭಾ ಕಾರ್ಯಾಲಯ – ತಿಪಟೂರು

ಅಧಿಸೂಚನೆ

ಕ್ರಮಾಂಕ:ಸಿಬ್ಬಂದಿ(3)/ಸಿಆರ್/227/2007-08, ದಿನಾಂಕ: 20ನೇ ಏಪ್ರಿಲ್ 2010

ಕೇಂದ್ರ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 19(1)ರನ್ವಯ ತಿಪಟೂರು ನಗರಸಭಾ ಕಾರ್ಯಾಲಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಪ್ರಾಧಿಕಾರಗಳನ್ನು ಪುನರ್ ಪರಿಷ್ಕರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಗೊತ್ತುಪಡಿಸಲಾಗಿದೆ.

ಕ್ರ. ಸಂ.	ಅಧಿಕಾರಿಗಳ ಹೆಸರು ಮತ್ತು ಹುದ್ದೆ	ನಾಮ ನಿರ್ದೇಶನ ಹುದ್ದೆ
1.	ಡಾ॥ ವೆಂಕಟೇಶಯ್ಯನವರು, ಪೌರಾಯುಕ್ತರು, ನಗರಸಭೆ, ತಿಪಟೂರು	ಮೇಲ್ಮನವಿ ಅಥವಾ ಅಪೀಲ್ ಪ್ರಾಧಿಕಾರ

ಪೌರಾಯುಕ್ತರು,
ನಗರಸಭೆ, ತಿಪಟೂರು

ಪಿ.ಡಿ. 9

ತಹಶೀಲ್ದಾರ್‌ರವರ ಕಾರ್ಯಾಲಯ, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರ, ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ನಮೂನೆ 27

94ನೇ ನಿಯಮದ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ನಂ. ಎಲ್.ಎನ್.ಡಿ./ಸಿಆರ್/19/07-08, ದಿನಾಂಕ: 28ನೇ ಮೇ 2010

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ಸರ್ಕಾರಿ ನಂಬರ್ ಕಾಣದ ಖರಾಬು ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ,

ಈಗ ಕರ್ನಾಟಕ ಭೂ ಕಂದಾಯ ಅಧಿನಿಯಮದ 1964ರ 68ನೇ ಪ್ರಕರಣದ (1)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸಾರ್ವಜನಿಕ ನಂಬರ್ ಕಾಣದ ಖರಾಬು ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕ ನಂಬರ್ ಕಾಣದ ಖರಾಬು ಭಾಗದಲ್ಲಿ ಅಥವಾ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳ್ಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕರ ನಂಬರ್ ಕಾಣದ ಖರಾಬು ಹಕ್ಕಿನ ಜೊತೆಗೆ ಸದರಿ ನಂಬರ್ ಕಾಣದ ಖರಾಬು ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಭತ್ತು (90) ದಿನದೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮ್ ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ರವರಿಗೆ ಬರಹದಲ್ಲಿ ತಿಳಿಸತಕ್ಕದ್ದು, ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೈಮ್‌ಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯೂಟಿ ಕಮೀಷನರರು ಪರಿಶೀಲಿಸತಕ್ಕದ್ದು.

ಅನುಸೂಚಿ

ಭಾಗ ಇತ್ಯಾದಿ ಇರುವ ಗ್ರಾಮಗಳು	ದೊಡ್ಡಬನಹಳ್ಳಿ, ಬಿದರಹಳ್ಳಿ ಹೋಬಳಿ
ತಾಲ್ಲೂಕು	ಬೆಂಗಳೂರು ಪೂರ್ವ
ಜಿಲ್ಲೆ	ಬೆಂಗಳೂರು ನಗರ
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ದೊಡ್ಡಬನಹಳ್ಳಿ, ನಂಬರ್ ಕಾಣದ ಖರಾಬು
ರಸ್ತೆಯ ಭಾಗ ಅಥವಾ ಭಾಗಗಳ ಸರಿ ಸುಮಾರು ವಿಸ್ತೀರ್ಣ	ನಂಬರ್ ಕಾಣದ ಖರಾಬು 2-00 ಎಕರೆ
ಮೇರೆ	ನಕ್ಷೆಯಂತೆ ಪೂರ್ವ: ಸ.ನಂ. 30 ಹಾಗೂ 31 ರ ಜಮೀನು ಪಶ್ಚಿಮ: ಸ.ನಂ. 61, 63 ರ ಜಮೀನು ಉತ್ತರ: ಉಳಿಕೆ ಜಮೀನು ದಕ್ಷಿಣ: ಕುಂಬೇನ ಅಗ್ರಹಾರ ಗ್ರಾಮದ ಸ.ನಂ.
ಸಾರ್ವಜನಿಕ ರಸ್ತೆ, ಬೀದಿ, ಗಲ್ಲಿ, ದಾರಿ ಅಥವಾ ಅದರ ಭಾಗ	ನಂಬರ್ ಕಾಣದ ಖರಾಬು

ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರ, ಬೆಂಗಳೂರು

ಪಿ.ಆರ್. 196

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಧಿಕೃತ ಜ್ಞಾಪನ

ಸಂಖ್ಯೆ: ಎಲ್ ಎನ್ ಡಿ [ಎನ್.ಎ] ಸಿಆರ್ 143/2006-07, ದಿನಾಂಕ: 14ನೇ ಮೇ 2010

ವಿಷಯ: ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೆಂಚೇನಹಳ್ಳಿ ಗ್ರಾಮದ ಸರ್ವೆ ನಂ : 3ರಲ್ಲಿ 0-29 ಗುಂಟೆ ಜಮೀನನ್ನು ಬ್ರಾಹ್ಮಣರ ಅಪರ ಕರ್ಮ ಹಾಗೂ ಸ್ಮಶಾನಕ್ಕಾಗಿ ಕಾಯ್ದಿರಿಸುವ ಬಗ್ಗೆ.

ಉಲ್ಲೇಖ: ತಹಶೀಲ್ದಾರ್‌ರವರ ವರದಿ ಸಂಖ್ಯೆ: ಎಲ್‌ಎನ್‌ಡಿ [ಎನ್.ಎ.] ಸಿಆರ್ 386/2006-07, ದಿನಾಂಕ: 13.2.2007.

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಕೆಂಚೇನಹಳ್ಳಿ ಗ್ರಾಮದ ಸರ್ವೆ ನಂ : 3ರಲ್ಲಿ 0-29 ಗುಂಟೆ ಜಮೀನನ್ನು ಬ್ರಾಹ್ಮಣರ ಸ್ಮಶಾನ ಮತ್ತು ಅಪರ ಕರ್ಮ ಉದ್ದೇಶಕ್ಕೆ ಕಾಯ್ದಿರಿಸುವ ಬಗ್ಗೆ ತಹಶೀಲ್ದಾರ್, ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಬೆಂಗಳೂರು ರವರು ಉಲ್ಲೇಖದ ವರದಿಯಂತೆ ಸರ್ವೆ ನಂಬರ್, ಪಹಣಿ ದಾಖಲೆಯಂತೆ ಹುಲ್ಲುಬನಿ ಖರಾಬು ಎಂದು ವರ್ಗೀಕರಿಸಿರುವುದಾಗಿ ಇದರಲ್ಲಿ ಒಂದು ಕಲ್ಯಾಣಿ ಇದ್ದು, ಉಳಿಕೆ ಜಮೀನು ಖಾಲಿ ಇರುವುದಾಗಿ ಸದರಿ ಜಮೀನನ್ನು ಬ್ರಾಹ್ಮಣರ ಅಪರ ಕರ್ಮದ ಉದ್ದೇಶಕ್ಕೆ ಕಾಯ್ದಿರಿಸುವ ಬಗ್ಗೆ ಗ್ರಾಮಸ್ಥರ ತಕರಾರು ಇರುವುದಿಲ್ಲವಾಗಿ ವರದಿ ಮಾಡಿರುತ್ತಾರೆ.

ಆದ್ದರಿಂದ ತಹಸೀಲ್ದಾರ್, ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಬೆಂಗಳೂರು ರವರ ಉಲ್ಲೇಖದ ವರದಿಯಂತೆ ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಯಲಹಂಕ ಹೋಬಳಿ, ಕೆಂಚೇನಹಳ್ಳಿ ಗ್ರಾಮದ ಸರ್ವೆ ನಂ : 3 ರಲ್ಲಿನ 0-29 ಗುಂಟೆ ಜಮೀನನ್ನು ಬ್ರಾಹ್ಮಣರ ಸ್ಮಶಾನ ಮತ್ತು ಅಪರ ಕರ್ಮ ಉದ್ದೇಶಕ್ಕೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1969ರ ಕಲಂ 71ರಡಿಯಲ್ಲಿ ಈ ಕೆಳಕಂಡ ಷರತ್ತಿಗೊಳಪಡಿಸಿ ಕಾಯ್ದಿರಿಸಲಾಗಿದೆ.

ಷರತ್ತುಗಳು

1. ಕಾಯ್ದಿರಿಸಿದ ಜಮೀನನ್ನು ನಕ್ಷೆಯಂತೆ ಖಚಿತ ಪಡಿಸಿಕೊಂಡು ತಹಸೀಲ್ದಾರ್, ಬೆಂಗಳೂರು ಉತ್ತರ [ಅಪರ] ತಾಲ್ಲೂಕುರವರು ಬ್ರಾಹ್ಮಣರ ಸ್ಮಶಾನ ಮತ್ತು ಅಪರ ಕರ್ಮ ಉದ್ದೇಶಕ್ಕೆ ಮಾತ್ರ ಉಪಯೋಗಿಸಿಕೊಳ್ಳಲು ಸೂಕ್ತ ನಿಗಾ ವಹಿಸುವುದು.
2. ಸದರಿ ಜಮೀನನ್ನು ಕಾಯ್ದಿರಿಸಲಾದ ಉದ್ದೇಶಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
3. ಸದರಿ ಜಮೀನಿನಲ್ಲಿ ಯಾವುದೇ ಕಟ್ಟಡ ವಗೈರೆ ನಿರ್ಮಿಸಬೇಕಾದಲ್ಲಿ ತಹಸೀಲ್ದಾರ್‌ರವರಿಂದ ಅನುಮತಿಯನ್ನು ಪಡೆಯತಕ್ಕದ್ದು.
4. ಕಾಯ್ದಿರಿಸಲಾದ ಜಮೀನು ಸರ್ಕಾರಕ್ಕೆ ಅವಶ್ಯಕತೆ ಇದ್ದಲ್ಲಿ ಸದರಿ ಆದೇಶವನ್ನು ಯಾವುದೇ ತಿಳುವಳಿಕೆ ನೀಡದೆ ರದ್ದು ಪಡಿಸಲಾಗುವುದು.
5. ತಹಸೀಲ್ದಾರ್, ಬೆಂಗಳೂರು ಉತ್ತರ [ಅಪರ] ತಾಲ್ಲೂಕು, ಬೆಂಗಳೂರುರವರು ಸ್ಮಶಾನಕ್ಕೆ ಕಾಯ್ದಿರಿಸಿರುವ ಬಗ್ಗೆ ಕಂದಾಯ ದಾಖಲೆಯಲ್ಲಿ ನಮೂದಿಸತಕ್ಕದ್ದು.

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು

ಪಿ.ಆರ್. 190

ತಹಶೀಲ್ದಾರ್‌ರವರ ಕಾರ್ಯಾಲಯ, ದಾವಣಗೆರೆ

ನಂ.ಎಎಲ್‌ಎನ್:ಇತರೆ:ಸಿಆರ್:59/2007-08, ದಿನಾಂಕ: 10ನೇ ಮೇ 2010

ವಿಷಯ: ದಾವಣಗೆರೆ ತಾಲ್ಲೂಕು ಮಲ್ಲಶೆಟ್ಟಿಹಳ್ಳಿ ಗ್ರಾಮದ ಸ.ನಂ. 8/2 ರ ಜಮೀನಿನಲ್ಲಿ ನಕಾಶೆ ಕಂಡ ಕಾಲುದಾರಿಯನ್ನು ಬದಲಾಯಿಸುವ ಬಗ್ಗೆ.

ಉಲ್ಲೇಖ: ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಕಾರ್ಯಾಲಯದ ಅಧಿಕೃತ ಜ್ಞಾಪನ ಸಂಖ್ಯೆ:ಎಲ್‌ಎನ್‌ಡಿ:ಸಿಆರ್: 422/09-10, ದಿನಾಂಕ: 27.3.2010

ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಡಿ/63/ಇಎಲ್‌ಆರ್/68/111 ದಿನಾಂಕ: 30.08.1969 ಹಾಗೂ ಭೂ ಕಂದಾಯ ಕಾಯ್ದೆ ಕಲಂ 68(1) ರಿಂದ (5)ರಡಿಯಲ್ಲಿ

ಅಧಿಸೂಚನೆ

ದಾವಣಗೆರೆ ತಾಲ್ಲೂಕು ಮಲ್ಲಶೆಟ್ಟಿಹಳ್ಳಿ ಗ್ರಾಮದ ಸ.ನಂ.8/2ರ ರ ಜಮೀನಿನಲ್ಲಿ ನಕಾಶೆ ಕಂಡ ಕಾಲುದಾರಿಯನ್ನು ಬದಲಾಯಿಸುವ ಬಗ್ಗೆ ರಾ.ನಿ. ಆನಗೋಡು ಇವರು ಸ್ಥಳ ತನಿಖೆ ನಡೆಸಿ ಸಲ್ಲಿಸಿರುವ ವರದಿಯಲ್ಲಿ ಸದರಿ ಜಮೀನು ಕೈಗಾರಿಕೆಯ ಉದ್ದೇಶಕ್ಕೆ ಭೂಪರಿವರ್ತನೆಯಾಗಿರುತ್ತದೆ. ರಿ.ಸ.ನಂ.8/2 ರಲ್ಲಿ 4-00 ಎಕರೆ ಜಮೀನಿನಲ್ಲಿ ಪೂರ್ವ ಮತ್ತು ಪಶ್ಚಿಮ, ಪಶ್ಚಿಮ ಮತ್ತು ಪೂರ್ವಕ್ಕೆ ನಕಾಶೆ ಕಂಡ ಎರಡು ಕಾಲುದಾರಿಯಿದ್ದು ಉಪಯೋಗದಲ್ಲಿರುವುದಿಲ್ಲ ಸದರಿ ದಾರಿಗೆ

ಬದಲಾಗಿ ಸದರಿ ಜಮೀನಿನ ಪಶ್ಚಿಮ ದಿಕ್ಕಿನ ಅಂಚಿನಲ್ಲಿ ದಾರಿ ಇದ್ದು ಈ ದಾರಿ ಉಪಯೋಗದಲ್ಲಿದ್ದು ಅಭಿವೃದ್ಧಿಪಡಿಸಿರುತ್ತಾರೆ. ಸದರಿ ಜಮೀನಿನ ಕಾಲುದಾರಿಯನ್ನು ಕಾಯ್ದಿರಿಸಲು ಸದರಿ ಜಮೀನಿನ ಬಗ್ಗೆ ಸಾರ್ವಜನಿಕರ ಹಕ್ಕು ಹಾಗೂ ಹಿತಾಸಕ್ತಿ ಇಲ್ಲವೆಂಬ ಬಗ್ಗೆ ನಿರ್ಧರಿಸಬೇಕಾಗಿದೆ.

ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳು ಅಲ್ಲದೇ ಸಾರ್ವಜನಿಕರು ಸದರಿ ಜಮೀನಿನ ಸಾರ್ವಜನಿಕ ಹಕ್ಕನ್ನು ರದ್ದುಪಡಿಸುವ ಬಗ್ಗೆ ಯಾವುದೇ ವಿಧವಾದ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ 90 ದಿವಸಗಳೊಳಗೆ ಈ ಕಾರ್ಯಾಲಯಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

ಸದರಿ ಭೂಮಿ ನಕಾಶೆಯನ್ನು ಈ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಕ್ರ. ಸಂ.	ಖಾತೆದಾರರ ಹೆಸರು	ಖಾತೆದಾರ/ಅನುಭವದಾರ ಗೇಣಿದಾರ ಋಣಭಾರ ವ್ಯಕ್ತಿಗಳ ಹೆಸರು	ಸ.ನಂ.	ಜಮೀನಿನ ತರಹೆ	ರಸ್ತೆಗಾಗಿ ಸ್ವಾಧೀನ ಪಡಿಸಿಕೊಂಡ ಜಮೀನಿನ ವಿಸ್ತೀರ್ಣ	ಭೂ ಕಂದಾಯ
1	ಐ.ಪಿ. ಸೋಮನಾಥ ಬಿನ್ ಐನಹಳ್ಳಿ ಪುಟ್ಟಪ್ಪ, ಎಂ.ಸಿ.ಸಿ 'ಬಿ' ಬ್ಲಾಕ್ ದಾವಣಗೆರೆ	ಸ್ವಂತಕ್ಕೆ	8/2	ಭೂಪರಿವರ್ತನೆ ಯಾದ ಜಮೀನು	0–30 ಅಡಿ ರಸ್ತೆ	2–44

ತಹಶೀಲ್ದಾರ್,
ದಾವಣಗೆರೆ ತಾಲ್ಲೂಕು

ಪಿ.ಆರ್. 186

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಪ್ರಕಟಣೆ

ನಮೂನೆ–27

ಕಲಂ 68 (1) ನಿಯಮ 94 ರಡಿ ಘೋಷಣೆ

ನಂ.ಎಲ್‌ಎನ್ ಡಿ ಸಿಆರ್: 243/09–10, ದಿನಾಂಕ: 18ನೇ ಮೇ 2010

ರಾಜ್ಯ ಸರ್ಕಾರಕ್ಕೆ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಸಾರ್ವಜನಿಕ ರಸ್ತೆಯ ಭಾಗ ರಾಜ್ಯ ಸರ್ಕಾರದ ಆಸ್ತಿಯಾಗಿರುವುದು ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕವಿಲ್ಲವೆಂದು ಕಂಡು ಬಂದಿರುತ್ತದೆ.

ಈಗ ಉಪಕಲಂ (1) ಕಲಂ 68 ರ ಕರ್ನಾಟಕ ಭೂ ಕಂದಾಯ ಕಾಯಿದೆ 1964 ರಡಿ ದತ್ತವಾದ ಅಧಿಕಾರದ ಮೇಲೆ, ಕರ್ನಾಟಕ ಸರ್ಕಾರವು ಆರ್‌ಡಿ 31 ಎಲ್‌ಜಿಸಿ 2010 ದಿನಾಂಕ: 16/04/2010 ರಲ್ಲಿ ನೀಡಿರುವ ಅನುಮತಿ ಮೇರೆ ಜಿಲ್ಲಾಡಳಿತವು ಸದರಿ ಸಾರ್ವಜನಿಕ ರಸ್ತೆಯ ಭಾಗವನ್ನು ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇಲ್ಲವೆಂದು ಹಾಗೂ ಸದರಿ ಸಾರ್ವಜನಿಕ ರಸ್ತೆ ಮೇಲಿನ ಸಾರ್ವಜನಿಕ ಹಾಗೂ ಖಾಸಗಿ ವ್ಯಕ್ತಿಗಳ ಹಕ್ಕು ರದ್ದುಪಡಿಸಿ ಘೋಷಿಸಲಾಗಿದೆ.

ಯಾವುದೇ ಸಾರ್ವಜನಿಕ ವ್ಯಕ್ತಿ ಅಥವಾ ಯಾವುದೇ ಆಸಕ್ತಿವುಳ್ಳ ಅಥವಾ ಅಧಿಕಾರಿವುಳ್ಳ ವ್ಯಕ್ತಿ ಸಾರ್ವಜನಿಕ ರಸ್ತೆ ಅಥವಾ ಇನ್ನಾವುದೇ ಆಸಕ್ತಿವುಳ್ಳ ವ್ಯಕ್ತಿಗಳು ಈ ಪ್ರಸ್ತಾವನೆಯಿಂದ ಭಾದಿತರಾದವರು ಈ ಅಧಿಸೂಚನೆ ದಿನಾಂಕದಿಂದ 15 ದಿನದೊಳಗಾಗಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆ ಬಗೆಗಿನ ಆಕ್ಷೇಪಣೆಯನ್ನು, ಹಾಗೂ ಈ ಆಸಕ್ತಿಯ ಹಾಗೂ ಹಕ್ಕಿನ ಬಗೆಗಿನ ಸ್ವರೂಪ ಹಾಗೂ ಅದು ಯಾವ ರೂಪದಲ್ಲಿ ಪ್ರತಿಕೂಲವಾಗಿ ಪರಿಣಮಿಸುತ್ತದೆ. ಮತ್ತು ಈ ಆಸಕ್ತಿ ಅಥವಾ ಹಕ್ಕಿನ ಬಗೆಗಿನ ಪ್ರತಿಪಾದನೆ ವಿವರ ಹಾಗೂ ಪರಿಹಾರದ ಬಗ್ಗೆ ಲಿಖಿತವಾಗಿ ನೀಡತಕ್ಕದ್ದು. ಸದರಿ ಆಕ್ಷೇಪಣೆ ಹಾಗೂ ಹಕ್ಕುಗಳನ್ನು ಮೇಲ್ಕಂಡ ಕಾಯಿದೆಯಡಿ ಈ ಪ್ರಾಧಿಕಾರದಿಂದ ಪರಿಗಣಿಸಲಾಗುವುದು.

ಅನುಸೂಚಿ

ರಸ್ತೆಯ ಭಾಗವಿರುವ ಗ್ರಾಮ ಅಥವಾ ಗ್ರಾಮಗಳು	ಉಳ್ಳಾರ್ತಿಕಾವಲು ಸ.ನಂ. 1
ತಾಲ್ಲೂಕು	ಚಳ್ಳಕೆರೆ
ಜಿಲ್ಲೆ	ಚಿತ್ರದುರ್ಗ

ರಸ್ತೆಯ ಅಥವಾ ರಸ್ತೆಯ ಭಾಗದ ವಿವರಣೆ	ಚಳ್ಳಕೆರೆ-ಮೈಲನಹಳ್ಳಿ-ಓಬಳಾಪುರ ಎಂಡಿ ಆರ್ ರಸ್ತೆ ಚಳ್ಳಕೆರೆ-ಕಲ್ಯಾಣದುರ್ಗ ಸಂಪರ್ಕಿಸುವುದು
ರಸ್ತೆಯ ಅಂದಾಜು ವಿಸ್ತೀರ್ಣ	30 ಅಡಿ ಅಗಲ 4 ಕಿ.ಮೀ. ಉದ್ದದ ರಸ್ತೆ
ಚಕ್ಕುಬಂದಿ	ಪೂರ್ವಕ್ಕೆ: ಉಳ್ಳಾರ್ತಿ ಕಾವಲು ಸ.ನಂ. 1 ರ ಜಮೀನು ಪಶ್ಚಿಮಕ್ಕೆ: ಉಳ್ಳಾರ್ತಿ ಕಾವಲು ಸ.ನಂ. 1 ರ ಜಮೀನು ಉತ್ತರಕ್ಕೆ: ಸ.ನಂ. 473,472,469,468,467,461,460,457,456, 455,454,451,433,432,429,428,419,418,408,396 ದಕ್ಷಿಣಕ್ಕೆ: ಉಳ್ಳಾರ್ತಿ ಕಾವಲು ಸ.ನಂ. 1 ರ ಜಮೀನು

ಅಮ್ಲಾನ್ ಆದಿತ್ಯ ಬಿಸ್ವಾಸ್

ಪಿ.ಆರ್. 187 ಜಿಲ್ಲಾಧಿಕಾರಿಗಳು,

ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ತುಮಕೂರು ಜಿಲ್ಲೆ, ತುಮಕೂರು

ರದ್ದಿಯಾತಿ ಅಧಿಸೂಚನೆ

ಪ್ರಕರಣ ಸಂಖ್ಯೆ:ಎಲ್.ಎ.ಕ್ಯೂ.ಎಸ್.ಆರ್/2/2010-11, ದಿನಾಂಕ: 27ನೇ ಏಪ್ರಿಲ್ 2010

ಭೂ ಸ್ವಾಧೀನ ಕಾಯಿದೆ 1894 (ಸೆಂಟ್ರಲ್ ಕಾಯಿದೆ 1894)ರಂತೆ ವಿಧಿ 4(1)ರ ಅಧಿಸೂಚನೆ ಸಂಖ್ಯೆ:ಎಲ್ಎಕ್ಯೂ:ಎಸ್ಆರ್:39/2009-10, ದಿನಾಂಕ 29.10.2009 ರಂತೆ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರಿಂದ ಅನುಮೋದಿಸಿದ್ದು, ಸದರಿ ಅಧಿಸೂಚನೆಯ ದಿನಾಂಕ 03.12.2009ರ ಕರ್ನಾಟಕ ರಾಜ್ಯ ಪತ್ರದ ಪುಟ 1323 ರಿಂದ 1334 ರವರೆಗೆ ಭಾಗ-6ರಲ್ಲಿ ಮಡೆನೂರು ಗ್ರಾಮದ ಜಮೀನು ಹೇಮಾವತಿ ನಾಲಾ ಯೋಜನೆಗೆ ಭೂ ಸ್ವಾಧೀನಪಡಿಸಲು ಪ್ರಕಟಣೆ ಹೊರಡಿಸಿರುತ್ತದೆ. ಆದರೆ ಈ ಗ್ರಾಮಗಳ ಬಾಬ್ತು ಜಂಟಿ ಮೋಜಣಿ ಕಾರ್ಯ ಪೂರೈಸಿದಾಗ ಈ ಕೆಳಕಂಡ ಅನುಸೂಚಿಯಲ್ಲಿ ನಮೂದಿಸಿರುವ ಸರ್ವೆ ನಂಬರುಗಳ ಬಾಬ್ತು ಕಲಂ 4(1) ರಂತೆ ಪ್ರಕಟಿಸಲಾದ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣ ಭೂ ಸ್ವಾಧೀನಕ್ಕೆ ಒಳಪಡುವುದೆಂದು ಕಂಡು ಬಂದಿರುವುದರಿಂದ ಕಲಂ 4(1) ರಲ್ಲಿ ಹೆಚ್ಚುವರಿಯಾಗಿ ಪ್ರಕಟವಾಗಿದ್ದು, ವಿಸ್ತೀರ್ಣವನ್ನು ರದ್ದುಪಡಿಸಲು ರದ್ದಿಯಾತಿ ಅಧಿಸೂಚನೆ ಹೊರಡಿಸಿರುವುದಾಗಿ ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ: ತುಮಕೂರು ಹೋಬಳಿ: ಕಸಬ ತಾಲ್ಲೂಕು : ತಿಪಟೂರು ಗ್ರಾಮ : ಮಡೆನೂರು

ಕ್ರ.ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ.ನಂ.	ಭೂ ಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ	ಷರಾ
		ಗ್ರಾಮ:1. ಮಡೆನೂರು			
1	1	ಹೊನ್ನಯ್ಯ ಬಿನ್ ತಿಮ್ಮಪ್ಪ	41/1	0-01	ಕಮ್ಮಿಯಾಗಿದೆ
2	3	ಸಣ್ಣಬಸವಯ್ಯ ಬಿನ್ ಬಸವೇಗೌಡ	41/3	0-0 3/4	ಕಮ್ಮಿಯಾಗಿದೆ
3	5	ನಾಗರಾಜು, ನಾಗಮ್ಮ	43/3	0-01 1/2	ಕಮ್ಮಿಯಾಗಿದೆ
4	7	ಸಣ್ಣ ಬಸವಯ್ಯ ಬಿನ್ ಬಸವೇಗೌಡ	43/5	0-02 1/2	ಕಮ್ಮಿಯಾಗಿದೆ
5	9	ಎಂ.ಆರ್. ಪ್ರಕಾಶ್ ಬಿನ್ ಎಂ.ಡಿ. ರಾಮಣ್ಣ	45/1 ಎ1	0-0 1/2	ಕಮ್ಮಿಯಾಗಿದೆ
6	10	ಎಂ.ಆರ್. ಪ್ರಕಾಶ್ ಬಿನ್ ಎಂ.ಡಿ. ರಾಮಣ್ಣ	45/1ಬಿ1	0-05	ಕಮ್ಮಿಯಾಗಿದೆ
7	14	ಹೆಚ್.ಟಿ. ಗಂಗಾಧರಯ್ಯ ಬಿನ್ ತಿಮ್ಮೇಗೌಡ, ಎಂ.ಎಸ್. ದಯಾನಂದಸ್ವಾಮಿ ಬಿನ್ ಎಂ.ಡಿ. ಶಿವಣ್ಣ	49/4	0-01	ಕಮ್ಮಿಯಾಗಿದೆ

ಕ್ರ.ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ.ನಂ.	ಭೂ ಸ್ವಾಧೀನಕ್ಕೊಳ ಪಡದ ಕಡಿಮೆಯಾದ ವಿಸ್ತೀರ್ಣ	ಷರಾ
8	15	ಶಿವಲಿಂಗಯ್ಯ ಬಿನ್ ಹೊನ್ನೇಗೌಡ, ತೋಂಟರಾಧ್ಯ ಬಿನ್ ಹೊನ್ನೇಗೌಡ	25/1	0–0 3/4	ಕಮ್ಮಿಯಾಗಿದೆ
9	17	ಎಂ.ಎಸ್. ನಿಂಗೇಗೌಡ ಬಿನ್ ಎಂ.ಡಿ. ಸಿದ್ದರಾಮಯ್ಯ	24/5	0–01	ಕಮ್ಮಿಯಾಗಿದೆ
10	20	ಎಂ.ಡಿ. ಆನಂದಮೂರ್ತಿ ಬಿನ್ ದೊಡ್ಡೇಗೌಡ	24/9	0–0 3/4	ಕಮ್ಮಿಯಾಗಿದೆ
11	22	ರಾಜಶೇಖರಯ್ಯ ಬಿನ್ ಎಂ.ಸಿ. ಶಿವಬಸಪ್ಪ	22/8ಬಿ	0–0 3/4	ಕಮ್ಮಿಯಾಗಿದೆ
12	23	ಜಯಮ್ಮ ಕೋಂ ಎಂ.ನಾಗರಾಜು, ಎಂ.ಎಸ್. ಮಲ್ಲಿಕಾಪಾಟೀಲ್ ಬಿನ್ ಎಂ.ನಾಗರಾಜು, ಎಂ.ಎನ್. ವಿದ್ಯಾಸಾಗರ್ ಬಿನ್ ಎಂ.ನಾಗರಾಜು, ಎಂ.ಎನ್. ನವೀನ್ ಬಿನ್ ಎಂ.ನಾಗರಾಜು	21/1	0–0 1/2	ಕಮ್ಮಿಯಾಗಿದೆ
13	24	ಜಯಮ್ಮ ಕೋಂ ಎಂ.ನಾಗರಾಜು, ಎಂ.ಎಸ್. ಮಲ್ಲಿಕಾಪಾಟೀಲ್ ಬಿನ್ ಎಂ.ನಾಗರಾಜು, ಎಂ.ಎನ್. ವಿದ್ಯಾಸಾಗರ್ ಬಿನ್ ಎಂ.ನಾಗರಾಜು, ಎಂ.ಎನ್. ನವೀನ್ ಬಿನ್ ಎಂ.ನಾಗರಾಜು	21/3	0–0 1/2	ಕಮ್ಮಿಯಾಗಿದೆ
14	25	ನಾಗರಾಜು, ನಾಗಮ್ಮ	19	0–01	ಕಮ್ಮಿಯಾಗಿದೆ
15	26	ಎಂ.ಬಿ. ಬೋರೇಗೌಡ ಬಿನ್ ಬಸವಲಿಂಗೇಗೌಡ	18/1	0–05	ಕಮ್ಮಿಯಾಗಿದೆ
16	27	ನಾಗರಾಜು, ನಾಗಮ್ಮ	18/2	0–0 1/4	ಕಮ್ಮಿಯಾಗಿದೆ
17	31	ಹುಚ್ಚಪ್ಪ ಬಿನ್ ತಿಮ್ಮೇಗೌಡ, ಸಿದ್ದಯ್ಯ ಬಿನ್ ತಿಮ್ಮೇಗೌಡ, ರುದ್ರಪ್ಪ ಬಿನ್ ಹುಚ್ಚಪ್ಪ, ಬಸವರಾಜು ಬಿನ್ ಹುಚ್ಚಪ್ಪ	14/9	0–0 1/2	ಕಮ್ಮಿಯಾಗಿದೆ
18	33	ಎಂ.ಬಿ.ಬೋರೇಗೌಡ ಬಿನ್ ಬಸವಲಿಂಗೇಗೌಡ	14/11	0–0 1/2	ಕಮ್ಮಿಯಾಗಿದೆ
19	34	ಎಂ.ಆರ್. ಯೋಗೀಶಯ್ಯ ಬಿನ್ ರುದ್ರಯ್ಯ	13/2	0–0 1/2	ಕಮ್ಮಿಯಾಗಿದೆ
20	36	ಎಂ.ಎಸ್. ಷಡಾಕ್ಷರಯ್ಯ ಬಿನ್ ಶಿವಪ್ಪ	10/3	0–0 1/4	ಕಮ್ಮಿಯಾಗಿದೆ
21	38	ಚಿಕ್ಕೇಗೌಡ ಬಿನ್ ನಂಜೇಗೌಡ, ಎಂ.ಸಿ. ಶಿವಯ್ಯ ಬಿನ್ ಚಿಕ್ಕೇಗೌಡ, ಆನಂದಮೂರ್ತಿ ಬಿನ್ ಚಿಕ್ಕಣ್ಣ, ಚಿಕ್ಕಣ್ಣ ಬಿನ್ ಬೋರಲಿಂಗಯ್ಯ, ಎಂ.ಬಿ. ಶಶಿಧರ್ ಬಿನ್ ಬಸವಲಿಂಗಪ್ಪ	9/1	0–01	ಕಮ್ಮಿಯಾಗಿದೆ
22	39	ಮಂಜುನಾಥ್ ಬಿನ್ ಲಿಂಗದೇವರು, ಮಂಜುನಾಥ ಬಿನ್ ಲಿಂಗದೇವರು	9/2	0–0 1/4	ಕಮ್ಮಿಯಾಗಿದೆ
23	42	ರಾಜಶೇಖರಯ್ಯ ಬಿನ್ ಶಿವಗಂಗಪ್ಪ	7/1	0–0 1/2	ಕಮ್ಮಿಯಾಗಿದೆ
24	46	ಎಂ.ಎಲ್. ಮಹಾಲಿಂಗಪ್ಪ ಬಿನ್ ಲಿಂಗೇಗೌಡ	4	0–0 1/2	ಕಮ್ಮಿಯಾಗಿದೆ
25	47	ಎಂ.ಸಿ. ಲೋಕೇಶ್ ಬಿನ್ ಚಿಕ್ಕಣ್ಣ, ಎಂ.ಸಿ. ಬೋರೇಗೌಡ ಬಿನ್ ಚಿಕ್ಕಣ್ಣ, ಚಿಕ್ಕಣ್ಣ ಬಿನ್ ಬೋರೇಗೌಡ	3/1	0–0 1/2	ಕಮ್ಮಿಯಾಗಿದೆ

ಕ್ರ.ಸಂ.	4(1)ರ ಕ್ರ.ಸಂ.	ಹಿಡುವಳಿದಾರರ ಹೆಸರುಗಳು	ಸ.ನಂ.	ಭೂ ಸ್ವಾಧೀನಕ್ಕೊಳಪಡದ ಕಡಿಮೆಯಾದ ವಿಸ್ತೀರ್ಣ	ಷರಾ
26	49	ಉಮಾದೇವಮ್ಮ ಕೋಂ ಚಂದ್ರಪ್ಪ	101/1	0-01 1/2	ಕಡಿಮೆಯಾಗಿದೆ
27	50	ದೊಡ್ಡೇಗೌಡ ಎಂ.ಎಸ್.ಬಿನ್ ಶಿವನಂಜಪ್ಪ	101/2	0-03	ಕಡಿಮೆಯಾಗಿದೆ
28	54	ಶಿವಲಿಂಗಪ್ಪ ಬಿನ್. ಬೋರೇಗೌಡ, ದ್ರಾಕ್ಷಾಯಿಣಮ್ಮ ಬಿನ್ ಬಸಪ್ಪ	123/3ಎ	0-03	ಕಮ್ಮಿಯಾಗಿದೆ
29	56	ಎಂ.ಎಲ್. ನಾಗರಾಜು ಬಿನ್ ಲಿಂಗಪ್ಪ, ಎಂ.ಎಲ್. ಮಹದೇವಯ್ಯ ಬಿನ್ ಲಿಂಗಪ್ಪ	122/2	0-04 3/4	ಕಮ್ಮಿಯಾಗಿದೆ
30	58	ಎನ್.ಸಿದ್ದರಾಮಯ್ಯ ಬಿನ್ ನಂಜೇಗೌಡ, ಇತರೆ	116/3	0-02 1/2	ಕಡಿಮೆಯಾಗಿದೆ
31	59	ತೋಂಟಯ್ಯ ಬಿನ್ ಹೊನ್ನೇಗೌಡ	116/2	0-02	ಕಡಿಮೆಯಾಗಿದೆ
32	61	ಕೃಷ್ಣಮೂರ್ತಿ ಬಿನ್ ಚಿತ್ತಯ್ಯ	117	0-02	ಕಮ್ಮಿಯಾಗಿದೆ
33	62	ಚಿತ್ತಯ್ಯ, ಬಾಳಯ್ಯ	118/4	0-0 3/4	ಕಮ್ಮಿಯಾಗಿದೆ
34	65	ಸಣ್ಣ ಚಿತ್ತಯ್ಯ ಬಿನ್ ಚಿತ್ತಯ್ಯ	118/1	0-01 1/2	ಕಮ್ಮಿಯಾಗಿದೆ
35	66	ನಂಜೇಗೌಡ ಬಿನ್ ತಿರುಮಲೇಗೌಡ, ಶಿವಲಿಂಗಯ್ಯ ಬಿನ್ ಹೊನ್ನೇಗೌಡ, ಪುಷ್ಪಾ ಕೋಂ ಲಿಂಗರಾಜು, ಗಂಗಮ್ಮ ಕೋಂ ಎನ್. ಸಿದ್ದರಾಮಯ್ಯ	142/1ಎ	0-03	ಕಡಿಮೆಯಾಗಿದೆ
36	68	ಉಮಾದೇವಮ್ಮ ಕೋಂ ಚಂದ್ರಪ್ಪ	142/3	0-03	ಕಮ್ಮಿಯಾಗಿದೆ
37	69	ಶಿವಲಿಂಗಯ್ಯ ಬಿನ್ ಹೊನ್ನೇಗೌಡ, ಕಲ್ಲಪ್ಪ ಬಿನ್ ನಂಜೇಗೌಡ	142/4	0-06	ಕಡಿಮೆಯಾಗಿದೆ
38	70	ಎಂ.ಬಿ. ನಟರಾಜು ಬಿನ್ ಬಸಪ್ಪ, ಎಂ.ಬಿ. ಲಿಂಗರಾಜು ಬಿನ್ ಬಸಪ್ಪ	142/5	0-01	ಕಡಿಮೆಯಾಗಿದೆ
39	71	ರಾಮಣ್ಣ ಬಿನ್ ವೆಂಕಟಯ್ಯ, ಗಂಗಪ್ಪ ಬಿನ್ ವೆಂಕಟಯ್ಯ, ಈರಣ್ಣ ಬಿನ್ ವೆಂಕಟಯ್ಯ	144/3ಎ	0-04	ಕಮ್ಮಿಯಾಗಿದೆ
40	72	ಈರಣ್ಣ ಬಿನ್ ವೆಂಕಟಯ್ಯ	144/5	0-03	ಕಡಿಮೆಯಾಗಿದೆ
41	74	ಅಪ್ಪಸ್ವಾಮಿ ಗೌಡ ಬಿನ್ ಪುಟ್ಟೇಗೌಡ	151/14ಎ	0-03 1/2	ಕಮ್ಮಿಯಾಗಿದೆ
42	76	ತಿಮ್ಮರಾಯಪ್ಪ ಬಿನ್ ತಿಮ್ಮಯ್ಯ, ಶಿವಯ್ಯ ಬಿನ್ ತಿಮ್ಮಯ್ಯ, ಗುತ್ತಿಗಯ್ಯ ಬಿನ್ ತಿಮ್ಮಯ್ಯ ಮತ್ತು ಇತರರು	167	0-11 1/2	ಕಡಿಮೆಯಾಗಿದೆ
43	77	ಈರಯ್ಯ ಬಿನ್ ತಿಮ್ಮಯ್ಯ, ದಾಸಪ್ಪ ಬಿನ್ ಲೇ. ಕೊಂಡಬೋವಿ, ಶಾಂತಣ್ಣ ಮತ್ತು ಇತರರು	165	0-12	ಕಡಿಮೆಯಾಗಿದೆ
ಒಟ್ಟು				**2-15 1/4**	

ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ, ತುಮಕೂರು

ಪಿ.ಆರ್. 171

ವಿಶೇಷ ಭೂಸ್ವಾಧೀನಾಧಿಕಾರಿಗಳವರ ಕಾರ್ಯಾಲಯ, ಹೇಮಾವತಿ ನಾಲಾ ವಲಯ, ತುಮಕೂರು

ಭೂಸ್ವಾಧೀನ ಅಧಿನಿಯಮ 1894 ರ ಪಕರಣ 16(2) ರ ಅನ್ವಯ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಸ್‌ಎಲ್‌ಎಒ/ಎಸ್‌ಆರ್ (ಗು)20/2001–02, ದಿನಾಂಕ: 26ನೇ ಮೇ 2010

ಕರ್ನಾಟಕ ಸರ್ಕಾರದವರು 1961 ನೇ ಸಾಲಿನ ಕರ್ನಾಟಕ ಅಧಿನಿಯಮ ಕಮಸಂಖ್ಯೆ: 17 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂಸಂಗ್ರಹಣ ಅಧಿನಿಯಮ (1894ರ ಸಾಲಿನ ಕೇಂದ್ರ ಅಧಿನಿಯಮ 1ರ) ಪ್ರಕರಣ 16(2)ರ ಮೇರೆಗೆ ಈ ಮೂಲಕ ಅನುಸೂಚಿಯಡಿ ಸೂಚಿಸಲಾದ ಜಮೀನುಗಳನ್ನು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಹೇಮಾವತಿ ನಾಲಾ ಯೋಜನೆಯ ನಾಲಾ ನಿರ್ಮಾಣಕ್ಕಾಗಿ ಅಧಿಕೃತವಾಗಿ ಸದರಿ ಭೂಸ್ವಾಧೀನ ಅಧಿನಿಯಮದ ಪಕರಣ 16(1) ರಂತೆ ವಶಪಡಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪಕಟಿಸಲಾಗಿದೆ ಹಾಗೂ ಕಾವೇರಿ ನೀರಾವರಿ ನಿಗಮ ನಿಯಮಿತ ರವರಿಗೆ ವಹಿಸಿಕೊಡಲಾಗಿದೆ ಎಂದು ಈ ಮೂಲಕ ಪ್ರಕಟಿಸಲಾಗಿದೆ.

ಅನುಸೂಚಿ

ಜಿಲ್ಲೆ : ತುಮಕೂರು ತಾಲ್ಲೂಕು : ತುರುವೇಕೆರೆ ಹೋಬಳಿ : ದಂಡಿನಶಿವರ ಗ್ರಾಮ : ಸಂಪಿಗೆ

ಕ್ರ. ಸಂ	ಸ.ನಂ.	ತರಹೆ	ವಿಸ್ತೀರ್ಣ ಎ–ಗುಂ	ಆಕಾರ ರೂ.ಪೈ.	ವಶಪಡಿಸಿ ಕೊಂಡ ದಿನಾಂಕ
1. ಗ್ರಾಮ: ಸಂಪಿಗೆ					
1	255	ಭಾಗಾಯ್ತು	0–01$^1/_2$	0–08	5.12.08

ವಿಶೇಷ ಭೂ ಸ್ವಾಧೀನಾಧಿಕಾರಿಗಳು

ಪಿ.ಆರ್. 194 ಹೇಮಾವತಿ ನಾಲಾವಲಯ, ತುಮಕೂರು.

ತಹಸೀಲ್ದಾರ್‌ರವರ ಕಾರ್ಯಾಲಯ, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ

ನಮೂನೆ – 27

ನಂ. ಎಲ್.ಎನ್.ಡಿ:ಸಿಆರ್:56/2010–11, ದಿನಾಂಕ: 3ನೇ ಮೇ 2010

94ನೇ ನಿಯಮದ 68(1)ನೇ ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ಸಾರ್ವಜನಿಕ ರಸ್ತೆಯ/ಕಟ್ಟೆ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಿರುವುದರಿಂದ.

ಈಗ, ಕರ್ನಾಟಕ ಭೂಕಂದಾಯ ಅಧಿನಿಯಮದ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಸಾರ್ವಜನಿಕ ರಸ್ತೆಯ/ಕಟ್ಟೆ ಸದರಿ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಮತ್ತು ಸಾರ್ವಜನಿಕರ ರಸ್ತೆಯ/ಕಟ್ಟೆ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳ ಕೊನೆಗೊಳ್ಳತಕ್ಕದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

2. ಸಾರ್ವಜನಿಕ ಹೆದ್ದಾರಿಯ ಹಕ್ಕಿನ ಜೊತೆಗೆ ಸದರಿ ರಸ್ತೆಯ/ಕಟ್ಟೆ ಸದರಿ ಭಾಗದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ಸಾರ್ವಜನಿಕರು ಅಥವಾ ಯಾವನೇ ವ್ಯಕ್ತಿಯು, ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗೆ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂಥ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೇಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಜಿಲ್ಲೆಯ ಡೆಪ್ಯೂಟಿ ಕಮೀಷನರ್ ರಿಗೆ ಬರಹದಲ್ಲಿ ತಿಳಿಸತಕ್ಕದ್ದು ಮತ್ತು ಸದರಿ ಆಕ್ಷೇಪಣೆಗಳನ್ನು ಮತ್ತು ಕ್ಲೇಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಡೆಪ್ಯೂಟಿ ಕಮೀಷನರು ಪರಿಶೀಲಿಸತಕ್ಕದ್ದು.

ಅನುಸೂಚಿ

ರಸ್ತೆಯ ಭಾಗ ಇತ್ಯಾದಿ ಇರುವ ಗ್ರಾಮಗಳು	ಚಾಮಲಾಪುರ (ಗಣಿಗನೂರು ವೃತ್ತ)
ತಾಲ್ಲೋಕುಗಳು	ಯಳಂದೂರು
ಜಿಲ್ಲೆ	ಚಾಮರಾಜನಗರ
ರಸ್ತೆಯ ಮೊದಲಾದುದರ ಭಾಗ ಅಥವಾ ಭಾಗಗಳ ವರ್ಣನೆ	ಸರ್ಕಾರಿ ಕಟ್ಟೆ
ರಸ್ತೆಯ ಭಾಗ ಅಥವಾ ಭಾಗಗಳ ಸರಿಸುಮಾರು ವಿಸ್ತೀರ್ಣ	ಗಣಿಗನೂರು ವೃತ್ತ ಸ.ನಂ. 328 ರಲ್ಲಿ 1.29 ಎಕರೆ
ಮೇರೆ	ಪೂರ್ವಕ್ಕೆ: ಹಾಲಿಕಟ್ಟೆ ಇರುವ ಪ್ರದೇಶ ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಸ.ನಂ. 329/2

ಸಾರ್ವಜನಿಕರ ರಸ್ತೆ/ಬೀದಿ/ಗಲ್ಲಿ/ದಾರಿ ಅಥವಾ ಕಟ್ಟೆ ಅದರ ಜಾಗ	ಸರ್ಕಾರಿ ಕಟ್ಟೆ

ತಹಸೀಲ್ದಾರ್,
ಯಳಂದೂರು ತಾಲ್ಲೂಕು, ಚಾಮರಾಜನಗರ

ಪಿ.ಆರ್. 198

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ನಮೂನೆ-27

ಅಧಿಸೂಚನೆ

ನಂ.ಎಲ್‌ಎನ್‌ಡಿ.ಸಿಆರ್.5/2010-11, ಚದಲುಪುರ, ದಿನಾಂಕ: 29ನೇ ಮೇ 2010

ವಿಷಯ: ಗುಡಿಬಂಡೆ ತಾಲ್ಲೂಕು, ಸೋಮೇನಹಳ್ಳಿ ಹೋಬಳಿ, ದೊಡ್ಡಕುರುಬರಹಳ್ಳಿ ಗ್ರಾಮದ ಸ.ನಂ.96 ರ ಪೈಕಿ 5-00 ಎಕರೆ ಜಮೀನನ್ನು ಮಿಲಿಟರಿ ಕೋಟಾದಡಿ ಶ್ರೀ ಶ್ರೀನಿವಾಸ ಬಿನ್ ನರಸಿಂಹಪ್ಪ ರವರಿಗೆ ಮಂಜೂರು ಮಾಡಲು ಮುಂದಿನ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ: 1. ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.172/09-10, ದಿನಾಂಕ:22/02/2010.

2. ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್‌ಎನ್‌ಡಿ.ಸಿಆರ್.34/09-10, ದಿನಾಂಕ: 11/02/2010.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ **"ಸರ್ಕಾರಿ"** ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ **"ಸರ್ಕಾರಿ"** ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ **"ಸರ್ಕಾರಿ"** ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳಿಸಲು ಉದ್ದೇಶಿಸಿರುವುದಾಗಿ ಈ ಮೂಲಕ ಘೋಷಿಸುತ್ತದೆ.

ಸದರಿ **"ಸರ್ಕಾರಿ"** ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು, ಮತ್ತು ಕ್ಲೈಮುಗಳನ್ನು, ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ : ಚಿಕ್ಕಬಳ್ಳಾಪುರ
ತಾಲ್ಲೂಕು : ಗುಡಿಬಂಡೆ
ಹೋಬಳಿ : ಸೋಮೇನಹಳ್ಳಿ
ಗ್ರಾಮ : ದೊಡ್ಡಕುರುಬರಹಳ್ಳಿ

ಸ.ನಂ. 96 ರ **'ಸರ್ಕಾರಿ'** ಪೈಕಿ 5-00 ಎಕರೆ ಜಮೀನನ್ನು ಶ್ರೀ ಶ್ರೀನಿವಾಸ ಬಿನ್ ನರಸಿಂಹಪ್ಪ ರವರಿಗೆ ಮಿಲಿಟರಿ ಕೋಟಾದಡಿ ಮಂಜೂರು ಮಾಡುವ ಸಲುವಾಗಿ ಸಾರ್ವಜನಿಕ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ : ಸ.ನಂ. 96 ರ ಉಳಿಕೆ ಜಮೀನು
ಪಶ್ಚಿಮಕ್ಕೆ : ಕಲ್ಲಿಪಾಪನ ದಿನ್ನೆ
ಉತ್ತರಕ್ಕೆ : ಸ.ನಂ. 96 ರ ಉಳಿಕೆ ಜಮೀನು
ದಕ್ಷಿಣಕ್ಕೆ : ಯರ್ರಲಕ್ಕೇನಹಳ್ಳಿ ಗಡಿ

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್. 201

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

ನಮೂನೆ-27

ಅಧಿಸೂಚನೆ

ನಂ.ಎಲ್ಎನ್‌ಡಿ.ಸಿಆರ್.116/2009-10, ಚದಲುಪುರ, ದಿನಾಂಕ: 29ನೇ ಮೇ 2010

ವಿಷಯ: ಚಿಕ್ಕಬಳ್ಳಾಪುರ ತಾಲ್ಲೂಕು, ನಂದಿ ಹೋಬಳಿ, ಚೊಕ್ಕಹಳ್ಳಿ ಗ್ರಾಮದ ಸ.ನಂ.64 ರ ಪೈಕಿ 0-09 ಗುಂಟೆ ಜಮೀನನ್ನು ರಸ್ತೆಗಾಗಿ ಕಾಯ್ದಿರಿಸುವ ವಿಚಾರದಲ್ಲಿ ಸಾರ್ವಜನಿಕ ಹಕ್ಕನ್ನು ನಿವೃತ್ತಿಗೊಳಿಸಿ, ಸದರಿ ಶೀರ್ಷಿಕೆಯಿಂದ ತಗ್ಗಿಸಿ ಮುಂದಿನ ಕ್ರಮ ಕೈಗೊಳ್ಳುವ ವಿಚಾರ.

ಉಲ್ಲೇಖ:
1. ಅಸಿಸ್ಟೆಂಟ್ ಕಮೀಷನರ್, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಇವರ ವರದಿ ಸಂಖ್ಯೆ: ಎಲ್ಎನ್‌ಡಿ.ಸಿಆರ್.99/09-10, ದಿನಾಂಕ:11/11/2009.
2. ತಹಶೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರ ವರದಿ ಸಂಖ್ಯೆ: ಎಲ್ಎನ್‌ಡಿ.ಸಿಆರ್.124/09-10, ದಿನಾಂಕ: 30/10/2009.

94ನೇ ನಿಯಮದ 68(1) ಪ್ರಕರಣದ ಮೇರೆಗಿನ ಘೋಷಣೆ

ಸರ್ಕಾರದ ಸ್ವತ್ತಾಗಿರುವ ಹಾಗೂ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ **"ಸರ್ಕಾರಿ ಕೊರಕಲು"** ಪ್ರದೇಶದ ಜಮೀನು ಸಾರ್ವಜನಿಕ ಉಪಯೋಗಕ್ಕೆ ಸದರಿ ಉದ್ದೇಶಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಿರುವುದರಿಂದ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 68ನೇ ಪ್ರಕರಣದ (1)ನೇ ಉಪ ಪ್ರಕರಣದಂತೆ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ **"ಸರ್ಕಾರಿ ಕೊರಕಲು"** ಪ್ರದೇಶವು ಸದರಿ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಸದರಿ **"ಸರ್ಕಾರಿ ಕೊರಕಲು"** ಪ್ರದೇಶದ ಜಮೀನಿನ ಮೇಲೆ ಸಾರ್ವಜನಿಕರ ಹಾಗೂ ಎಲ್ಲಾ ವ್ಯಕ್ತಿಗಳ ಹಕ್ಕುಗಳು ಕೊನೆಗೊಳತಕ್ಕದ್ದೆಂದು ಉದ್ದೇಶಿಸಿ ಈ ಮೂಲಕ ಘೋಷಿಸುತ್ತದೆ.

ಸದರಿ **"ಸರ್ಕಾರಿ ಕೊರಕಲು"** ಪ್ರದೇಶದಲ್ಲಿ ಅಥವಾ ಅದರ ಮೇಲೆ ಹಿತಾಸಕ್ತಿಯುಳ್ಳ ಅಥವಾ ಹಕ್ಕುಳ್ಳ ಅಥವಾ ಈ ಉದ್ದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ಸಾರ್ವಜನಿಕನು ಅಥವಾ ಯಾವನೇ ವ್ಯಕ್ತಿಯು ಈ ಜಮೀನನ್ನು ಸರ್ಕಾರದ ಇತರೇ ಉದ್ದೇಶಕ್ಕೆ ಪಡೆದುಕೊಳ್ಳುತ್ತಿರುವುದರಿಂದ ಈ ಅಧಿಸೂಚನೆಯನ್ನು ಹೊರಡಿಸಿದ ತೊಂಬತ್ತು ದಿನಗಳೊಳಗಾಗಿ ಸದರಿ ಉದ್ದೇಶದ ಬಗ್ಗೆ ತನ್ನ ಆಕ್ಷೇಪಣೆಗಳನ್ನು ಅಂತಹ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪವನ್ನು ಮತ್ತು ಪ್ರತಿಕೂಲ ಪರಿಣಾಮವು ಸಂಭವಿಸಿರಬಹುದಾದ ರೀತಿಯನ್ನು ಮತ್ತು ಅಂತಹ ಹಿತಾಸಕ್ತಿ ಅಥವಾ ಹಕ್ಕಿನ ಬಗ್ಗೆ ನಷ್ಟ ಪರಿಹಾರಕ್ಕಾಗಿ ಕ್ಲೈಮು ಮಾಡಲಾದ ಮೊಬಲಗು ಮತ್ತು ವಿವರಗಳನ್ನು ಈ ಕಛೇರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು ಮತ್ತು ಆಕ್ಷೇಪಣೆಗಳನ್ನು ಮತ್ತು ಕ್ಲೈಮುಗಳನ್ನು ಸದರಿ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಪರಿಶೀಲಿಸಲಾಗುವುದು.

ಅನುಸೂಚಿ

ಜಿಲ್ಲೆ	:	ಚಿಕ್ಕಬಳ್ಳಾಪುರ
ತಾಲ್ಲೂಕು	:	ಚಿಕ್ಕಬಳ್ಳಾಪುರ
ಹೋಬಳಿ	:	ನಂದಿ
ಗ್ರಾಮ	:	ಚೊಕ್ಕಹಳ್ಳಿ

ಸ.ನಂ. 64 ರ ಪೈಕಿ 0-09 ಗುಂಟೆ ರಸ್ತೆಗಾಗಿ ಕಾಯ್ದಿರಿಸುವ ಸಲುವಾಗಿ ಸಾರ್ವಜನಿಕರ ಹಕ್ಕು ನಿವೃತ್ತಿಗಾಗಿ ಪ್ರಸ್ತಾಪಿಸಲಾಗಿದೆ.

ಚೆಕ್ಕುಬಂದಿ

ಪೂರ್ವಕ್ಕೆ	:	ಸ.ನಂ. 52 ರ ಜಮೀನು
ಪಶ್ಚಿಮಕ್ಕೆ	:	ರಾಷ್ಟ್ರೀಯ ಹೆದ್ದಾರಿ-7 ರಸ್ತೆ
ಉತ್ತರಕ್ಕೆ	:	ಸ.ನಂ. 64 ರ ಉಳಿಕೆ ಜಮೀನು
ದಕ್ಷಿಣಕ್ಕೆ	:	ಸ.ನಂ. 64 ರ ಉಳಿಕೆ ಜಮೀನು

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಪಿ.ಆರ್. 202

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆರವರ ಕಾರ್ಯಾಲಯ

ಭೂ ಅರ್ಜನೆ ಅಧಿನಿಯಮದ 4(1) ನೇ ಪ್ರಕರಣದ ಮೇರೆಗಿನ ಅಧಿಸೂಚನೆ

ಪ್ರಕರಣ ಸಂಖ್ಯೆ: ಎಲ್.ಎ.ಕ್ಯೂ/ವಿವ/ 01 /10–11, ದಿನಾಂಕ: 7ನೇ ಜೂನ್ 2010

ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ, ಹರಪನಹಳ್ಳಿ ಪಟ್ಟಣಕ್ಕೆ ಒಳಚರಂಡಿ ಯೋಜನೆಯಡಿ ಕೊಳಚೆ ನೀರು ಶುದ್ಧೀಕರಣ ಘಟಕದ ನಿರ್ಮಾಣದ ಉದ್ದೇಶಕ್ಕಾಗಿ ಭೂ ಸ್ವಾಧೀನ ಅಗತ್ಯವಾಗಿದೆಯೆಂದು ಕರ್ನಾಟಕ ಸರ್ಕಾರಕ್ಕೆ ಕಂಡುಬಂದಿರುವುದರಿಂದ,

ಕರ್ನಾಟಕ ಅಧಿನಿಯಮದ 1961 ರ 17 ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ನಿಯಮ, 1894 (ಕೇಂದ್ರ ಅಧಿನಿಯಮ ಸಂಖ್ಯೆ: 1894) ಪ್ರಕರಣದ (1) ನೇ ಉಪ ಪ್ರಕರಣದ ಅನುಬಂಧಗಳ ಅನುಸಾರವಾಗಿ ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಆ ಬಗ್ಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ. ಹಾಗೂ ಕರ್ನಾಟಕ ಸರ್ಕಾರವು ಆ ಅಧಿನಿಯಮ 4(2) ರ ಪ್ರಕರಣದ ಮೂಲಕ ದತ್ತವಾದ ಅಧಿಕಾರಗಳನ್ನು ಚಲಾಯಿಸಲು ಉಪ ವಿಭಾಗಾಧಿಕಾರಿಗಳು ಹಾಗೂ ಭೂ ಸ್ವಾಧೀನಾಧಿಕಾರಿಗಳು, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ, ಅವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡುತ್ತದೆ.

ಸದರಿ ಅಧಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು ಅಧಿನಿಯಮ 5(ಎ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾರಗಳನ್ನು ನಿರ್ವಹಿಸಲು ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರನ್ನು ನೇಮಕ ಮಾಡಿದೆ.

ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು ತನ್ನ ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು 30 ದಿವಸಗಳ ಮುಂಚೆ ಕರ್ನಾಟಕ ಅಧಿನಿಯಮ, 1961 ರ 17 ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ, 1894 3(ಸಿ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾರಗಳನ್ನು ನಿರ್ವಹಿಸಲು ನೇಮಕವಾದ ಭೂ ಸ್ವಾಧೀನಾಧಿಕಾರಿಗಳು ಹಾಗೂ ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಇವರಿಗೆ ಲಿಖಿತದಲ್ಲಿ ಸಲ್ಲಿಸಬಹುದು.

ಸದರಿ ಅರ್ಜನೆ ಉದ್ದೇಶಕ್ಕಾಗಿ ಸದರಿ ಜಮೀನುಗಳ ಮೇಲೆ ನಿಯೋಜಿತವಾದ ಯಾವುದೇ ಮೋಜಣಿದಾರ ಅಥವಾ ಇತರೆ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅಥವಾ ಅವರ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡಬಾರದೆಂದು, ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ದಾವಣಗೆರೆ ಜಿಲ್ಲಾಧಿಕಾರಿಯವರ ಅನುಮತಿಯಿಲ್ಲದೇ, ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿ ಮೂಲಕ ಸದರಿ ಭೂಮಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವುದು. ಸದರಿ ಭೂಮಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ (7ನೇ ಖಂಡದ) (2)ನೆಯ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ಉಪ ವಿಭಾಗಾಧಿಕಾರಿಗಳು, ಹರಪನಹಳ್ಳಿ ಉಪ ವಿಭಾಗ, ಹರಪನಹಳ್ಳಿ ಇವರ ಕಛೇರಿಯಲ್ಲಿ ಭೂಮಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ **ತಾಲ್ಲೂಕು: ಹರಪನಹಳ್ಳಿ** **ಹೋಬಳಿ: ಕಸಬಾ** **ಗ್ರಾಮ: ನಾರಾಯಣಪುರ**

ಕ್ರ. ಸಂ	ಖಾತೆದಾರರ–ಅನುಭವದಾರರ – ಹಿತಾಸಕ್ತಿ ಹೊಂದಿರುವವರ ಹೆಸರು	ತರಹೆ	ಸರ್ವೆ ನಂ	ಚೆಕ್ಕು ಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ ಎ. ಸೆಂ.	ಆಕಾರ ರೂ. ಪೈ.
				ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ		
1	ಹಳ್ಳ	–	303	304, 305	302, 300	299	318	3.81	–

ಕ್ರ. ಸಂ	ಖಾತೆದಾರರ-ಅನುಭವದಾರರ - ಹಿತಾಸಕ್ತಿ ಹೊಂದಿರುವವರ ಹೆಸರು	ತರಹೆ	ಸರ್ವೆ ನಂ	ಚೆಕ್ಕು ಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ ಎ. ಸೆಂ.	ಆಕಾರ ರೂ. ಪೈ.
				ಪೂರ್ವ ಸ.ನಂ	ಪಶ್ಚಿಮ ಸ.ನಂ	ಉತ್ತರ ಸ.ನಂ	ದಕ್ಷಿಣ ಸ.ನಂ		
2	ರಾಮಪ್ಪ ಬಿನ್ ಜೋಗಿನ ಕೆಂಚಪ್ಪ, ಹ.ಹಳ್ಳಿ	ಖುಷ್ಕಿ	304	287	305	303	305	2.90	2.61
3	ಜೋಗಿನವ ಬಸಪ್ಪ ಬಿನ್ ಬಸಪ್ಪ, ಹ.ಹಳ್ಳಿ	ಖುಷ್ಕಿ	305/ಎ	304	303	303	305/ಸಿ	4.73	4.26
4	ಜೋಗಿನ ಕೆಂಚಪ್ಪ ಬಿನ್ ವರಗಬಸಪ್ಪ, ಹ.ಹಳ್ಳಿ.	ಖುಷ್ಕಿ	305/ಬಿ	305/ಎ	305/ಎ	305/ಎ	305/ಸಿ	0.01	0.01
5	ಜೋಗಿನ ಕಂಚಪ್ಪ ಬಿನ್ ವರಗಬಸಪ್ಪ, ಹ.ಹಳ್ಳಿ.	ಖುಷ್ಕಿ	305/ಸಿ	287, 305/ಡಿ	303, 305/ಎ	304, 305/ಎ	306, 307	6.57	5.92
6	ಜೋಗಿನವರಗ ಬಸಪ್ಪ ಬಿನ್ ಬಸಪ್ಪ, ಹ.ಹಳ್ಳಿ	ಖುಷ್ಕಿ	305/ಡಿ	287.	305/ಸಿ	305/ಸಿ	307	1.49	1.35
							ಒಟ್ಟು	19.51	14.15

ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ, ದಾವಣಗೆರೆ

ಪಿ.ಆರ್. 200

ಉಪ ಆಯುಕ್ತರು (ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಾರ್ಯಾಲಯ,

ಕೇಂದ್ರ ಕಛೇರಿ, ಅನೆಕ್ಸ್ ಬಿಲ್ಡಿಂಗ್ಸ್, 3ನೇ ಮಹಡಿ, ನರಸಿಂಹರಾಜು ವೃತ್ತ, ಬೆಂಗಳೂರು

ಭೂ ಅರ್ಜನೆ ಅಧಿನಿಯಮದ 4(1)ನೇ ಪ್ರಕರಣದ ಮೇರೆಗೆ ಅಧಿಸೂಚನೆ

ಕ್ರಮಾಂಕ:ಎಲ್.ಎ.ಸಿ/ಸಿ.ಆರ್/38/2008-09, ದಿನಾಂಕ: 1ನೇ ಜೂನ್ 2010

ಇದರ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಆಸ್ತಿಗಳು ಸಾರ್ವಜನಿಕ ಉದ್ದೇಶಕ್ಕಾಗಿ, ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ. 183 (ಹಳೆ ವಾರ್ಡ್ ನಂ.55ಎ) ರ ವ್ಯಾಪ್ತಿಯಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ-73/1, 73/2, 73/3 ಮತ್ತು ಚಿಕ್ಕಲಸಂದ್ರ ಗ್ರಾಮದ ಸರ್ವೆ ನಂ.15/1, 15/2, 15/3 ಮತ್ತು 16 ರಲ್ಲಿ ಒಟ್ಟು 1588-81 ಚ.ಮೀ. ಜಾಗವು ರಸ್ತೆ ನಿರ್ಮಾಣ ಮತ್ತು ಹಳ್ಳಕ್ಕೆ ಜಾಗ ಕಾಯ್ದಿರಿಸಲು ಅಗತ್ಯವಾಗಿ ಬೇಕಾಗಿದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕಂಡು ಬಂದಿರುವುದರಿಂದ

1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆಯ ಕಲಂ 177 ಮತ್ತು ಕರ್ನಾಟಕ ಅಧಿನಿಯಮ ಸಂಖ್ಯೆ:33ರ ಮೂಲಕ ತಿದ್ದುಪಡಿಯಾದ 1991ನೇ ಸಾಲಿನ ಭೂ ಸ್ವಾಧೀನ ಅಧಿನಿಯಮ 1894ರ (ಕೇಂದ್ರ ಅಧಿನಿಯಮ, ಸಂಖ್ಯೆ:1894ರ 1) 4ನೇ ಪ್ರಕರಣದ-(1)ನೇ ಉಪ ಪ್ರಕರಣದ ಉಪಬಂಧಗಳ ಅನುಸಾರವಾಗಿ, ಅದಕ್ಕೆ ಸಂಬಂಧಪಟ್ಟ ಎಲ್ಲರಿಗೂ ಈ ಬಗ್ಗೆ ಈ ಮೂಲಕ ನೋಟೀಸನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರವು ಆ ಅಧಿನಿಯಮದ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು- ಭೂ ಅರ್ಜನೆ ಅಧಿಕಾರಿ, ಅವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಲಾಗಿದೆ.

ಸದರಿ ಅಧಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರವು ಅಧಿನಿಯಮದ 5(ಎ) ಪ್ರಕರಣದ ಮೇರೆಗೆ ಉಪ ಆಯುಕ್ತರು (ಭೂಸ್ವಾಧೀನ) ರವರ ಪ್ರಕಾರ್ಯಗಳನ್ನು ನಿರ್ವಹಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರನ್ನು ನೇಮಕ ಮಾಡಿದೆ.

ಭೂಮಿಯಲ್ಲಿ/ಆಸ್ತಿಯಲ್ಲಿ ಹಿತಾಸಕ್ತಿ ಹೊಂದಿರುವ ಯಾವನೇ ವ್ಯಕ್ತಿಯು ತನ್ನ ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಅಧಿಸೂಚನೆಯು ಪ್ರಕಟವಾದ ತಾರೀಖಿನಿಂದ ಮೂವತ್ತು ದಿನಗಳ ಒಳಗಾಗಿ ಅಥವಾ ಅದಕ್ಕಿಂತ ಮುಂಚೆ ಕರ್ನಾಟಕ ಅಧಿನಿಯಮ 1961ರ 17ರ ಮೂಲಕ ತಿದ್ದುಪಡಿಯಾದ ಭೂ ಅರ್ಜನೆ ಅಧಿನಿಯಮ 1894ರ 3(ಸಿ) ಪ್ರಕರಣದ ಮೇರೆಗೆ ಉಪ ಆಯುಕ್ತರು (ಭೂಸ್ವಾಧೀನ) ರವರ ಪ್ರಕಾರ್ಯಗಳನ್ನು ನಿರ್ವಹಿಸಲು ನೇಮಕವಾದ ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು.

ಸದರ್ರ್ಜನೆ ಉದ್ದೇಶಕ್ಕಾಗಿ ಸದರಿ ಭೂಮಿಗಳ/ಆಸ್ತಿಗಳ ಮೇಲೆ ನಿಯೋಜಿತರಾದ ಯಾವುದೇ ಮೋಜಣಿದಾರರು ಅಥವಾ ಇತರೇ ವ್ಯಕ್ತಿಗಳಿಗೆ ಅಡ್ಡಿಯನ್ನುಂಟು ಮಾಡಬಾರದೆಂದು ಅತವಾ ಅವರ ಕಾರ್ಯದಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸದರಿ ಭೂಮಿ/ಆಸ್ತಿಗಳಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ವ್ಯಕ್ತಿಗಳಿಗೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ. ಈ ಅಧಿಸೂಚನೆಯು ಪ್ರಕಟವಾದ ದಿನಾಂಕದ ನಂತರ ಉಪ ಆಯುಕ್ತರು (ಭೂಸ್ವಾಧೀನ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು, ರವರ ಅನುಮತಿಯಿಲ್ಲದೆ ಮಾರಾಟ, ಗುತ್ತಿಗೆ, ಅಡಮಾನ, ವಿನಿಮಯದ ಮೂಲಕ ಅಥವಾ ಬೇರೆ ರೀತಿಯ ಮೂಲಕ ಸದರಿ ಭೂಮಿಗಳ/ಆಸ್ತಿಗಳ ವಿಲೇಗಾಗಿ ಮಾಡಿಕೊಂಡ ಯಾವುದೇ ಕರಾರುಗಳನ್ನು ಅಥವಾ ಅದರಲ್ಲಿ ಮಾಡಲಾದ ವೆಚ್ಚ ಅಥವಾ ಅಭಿವೃದ್ಧಿಗಳನ್ನು ಅಂತಿಮವಾಗಿ ಅರ್ಜನೆ ಮಾಡಿಕೊಳ್ಳಲಾಗುವ ಸದರಿ ಭೂಮಿ/ಆಸ್ತಿಗಳ ಅಂತಹ ಭಾಗಗಳಿಗೆ ಪರಿಹಾರಕ್ಕಾಗಿ ನಿರ್ಧರಣೆ ಮಾಡುವ ಅಧಿಕಾರಿಯು ಸದರಿ ಅಧಿನಿಯಮದ (ಏಳನೇ ಖಂಡ) 2ನೇ ಪ್ರಕರಣದ ಮೇರೆಗೆ ಗಣನೆಗೆ ತೆಗೆದುಕೊಳ್ಳಬಾರದು.

ವಿಶೇಷ ಭೂಸ್ವಾಧೀನಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ನಗರಪಾಲಿಕೆ ಕಟ್ಟಡಗಳು, 3ನೇ ಮಹಡಿ, ಅನೆಕ್ಸ್ ಬಿಲ್ಡಿಂಗ್, ನರಸಿಂಹರಾಜು ವೃತ್ತ, ಬೆಂಗಳೂರು, ಇವರ ಕಛೇರಿಯಲ್ಲಿ ಭೂಮಿಗಳ/ಆಸ್ತಿಗಳ ಸ್ಥೂಲ ನಕಾಶೆಯನ್ನು ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ. 183 (ಹಳೆ ವಾರ್ಡ್ ನಂ.55ಎ) ರ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ದಕ್ಷಿಣ ತಾಲ್ಲೂಕು- ಉತ್ತರಹಳ್ಳಿ ಹೋಬಳಿ, ಕತ್ರಿಗುಪ್ಪೆ ಗ್ರಾಮದ ಸರ್ವೆ ನಂ-73/1, 73/2, 73/3 ಮತ್ತು ಚಿಕ್ಕಲಸಂದ್ರ ಗ್ರಾಮದ ಸರ್ವೆ ನಂ. 15/1, 15/2, 15/3 ಮತ್ತು 16 ರಲ್ಲಿ ಒಟ್ಟು 1588.81 ಚ.ಮೀ. ಜಾಗವು ರಸ್ತೆ ನಿರ್ಮಾಣಕ್ಕೆ ಮತ್ತು ಹಳ್ಳಕ್ಕೆ ಜಾಗ ಕಾಯ್ದಿರಿಸಲು ಅಗತ್ಯವಾಗಿ ಬೇಕಾಗಿದೆ ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ, ಕಂಡು ಬಂದಿರುವುದರಿಂದ , ಇದನ್ನು ಭೂಸ್ವಾಧೀನಪಡಿಸಿಕೊಳ್ಳಲು

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ತರಹೆ	ಭೂಸ್ವಾಧೀನಕ್ಕೆ ಬೇಕಾಗಿರುವ ವಿಸ್ತೀರ್ಣ ಚ.ಮೀ.ಗಳಲ್ಲಿ	ಚಕ್ಕುಬಂದಿ			
							ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
01	ಕತ್ರಿಗುಪ್ಪೆ	73/1	ನಾರಾಯಣಪ್ಪ ಬಿನ್ ದೊಡ್ಡ ನಾರಾಯಣಪ್ಪ	ನಾರಾಯಣಪ್ಪ ಬಿನ್ ದೊಡ್ಡ ನಾರಾಯಣಪ್ಪ	ಖುಷ್ಕಿ	25.50	ಸ.ನಂ. 73/1 ರ ಉಳಿಕೆಜಾಗ	ಹಳೇ ಓಣಿ	ಸ.ನಂ. 72	ಸ.ನಂ. 73/2
02	ಕತ್ರಿಗುಪ್ಪೆ	73/2	ಕೆ.ಎಂ. ಅಣ್ಣಯ್ಯಪ್ಪ ಬಿನ್ ಮುನಿಭೈರಪ್ಪ	ಕೆ.ಎಂ. ಅಣ್ಣಯ್ಯಪ್ಪ ಬಿನ್ ಮುನಿಭೈರಪ್ಪ	ಖುಷ್ಕಿ	49.50	ಸ.ನಂ. 73/2 ರ ಉಳಿದ ಜಾಗ	ಹಳೇ ಓಣಿ	ಸ.ನಂ. 73/1	ಸರ್ಕಾರಿ ಓಣಿ
03	ಕತ್ರಿಗುಪ್ಪೆ	73/3	ಬೈಯಮ್ಮ ಕೋಂ ಆರ್. ನಾರಾಯಣಪ್ಪ	ಬೈಯಮ್ಮ ಕೋಂ ಆರ್. ನಾರಾಯಣಪ್ಪ	ಖುಷ್ಕಿ	162.50	ಹಳ್ಳ	ಸ.ನಂ. 73/3 ರ ಉಳಿದ ಜಾಗ	ಸ.ನಂ. 72	ಸರ್ಕಾರಿ ಓಣಿ
04	ಚಿಕ್ಕಲಸಂದ್ರ	15/1	ಚಿಕ್ಕವೆಂಕಟಪ್ಪ, ಸಿ. ಶಂಕರಪ್ಪ ಬಿನ್ ಚಿಕ್ಕವೆಂಕಪ್ಪ	ಚಿಕ್ಕವೆಂಕಟಪ್ಪ, ಸಿ. ಶಂಕರಪ್ಪ ಬಿನ್ ಚಿಕ್ಕವೆಂಕಪ್ಪ	ಖುಷ್ಕಿ	110.0	ಸ.ನಂ. 15/1 ರ ಉಳಿದ ಜಾಗ	ಸ.ನಂ. 15/1 ರ ಉಳಿದ ಜಾಗ	ಸ.ನಂ. 15/2	ಸ.ನಂ. 16
					ಖುಷ್ಕಿ	31.25	ಹಳ್ಳ	ಸ.ನಂ. 15/1 ರ ಉಳಿಕೆ ಜಾಗ	ಸ.ನಂ. 15/2	ಸ.ನಂ. 16
05	ಚಿಕ್ಕಲಸಂದ್ರ	15/2	ಲಕ್ಕಣ್ಣ ಬಿನ್ ರಾಮಯ್ಯ	ಲಕ್ಕಣ್ಣ ಬಿನ್ ರಾಮಯ್ಯ	ನಿವೇಶನ ಜಾಗ	154.38	ಸ.ನಂ. 15/2 ರ ಉಳಿದ ಜಾಗ	ಸ.ನಂ. 15/2 ರ ಉಳಿದ ಜಾಗ ಮತ್ತು ಸ.ನಂ. 14	ಸ.ನಂ. 15/3	ಸ.ನಂ. 15/1

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ತರಪೆ	ಭೂಸ್ವಾಧೀನಕ್ಕೆ ಬೇಕಾಗಿರುವ ವಿಸ್ತೀರ್ಣ ಚ.ಮೀ.ಗಳಲ್ಲಿ	ಚಕ್ಕುಬಂದಿ			
							ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
					ನಿವೇಶನ ಜಾಗ	25.00	ಹಳ್ಳ	ಸ.ನಂ. 15/2 ರ ಉಳಿದ ಜಾಗ	ಸ.ನಂ. 15/3	ಸ.ನಂ. 15/1
06	ಚಿಕ್ಕಲಸಂದ್ರ	15/3	ಲಕ್ಕಣ್ಣ ಬಿನ್ ರಾಮಯ್ಯ	ಲಕ್ಕಣ್ಣ ಬಿನ್ ರಾಮಯ್ಯ	ನಿವೇಶನ ಜಾಗ	152.63	ಸ.ನಂ. 15/3 ರ ಉಳಿದ ಜಾಗ	ಸ.ನಂ. 15/3 ರ ಉಳಿದ ಜಾಗ & ಸ.ನಂ. 14	ಸರ್ಕಾರಿ ಓಣಿ	ಸ.ನಂ. 15/2
					ನಿವೇಶನ ಜಾಗ	75.00	ಹಳ್ಳ	ಸ.ನಬಂ. 15/3 ರ ಉಳಿದ ಜಾಗ	ಸರ್ಕಾರಿ ಓಣಿ	ಸ.ನಂ. 15/2
07	ಚಿಕ್ಕಲಸಂದ್ರ	16	ರೇಣುಕಾದೇವಿ ಕೋಂ ಮುನಿವೆಂಕಟಪ್ಪ	ರೇಣುಕಾದೇವಿ ಕೋಂ ಮುನಿವೆಂಕಟಪ್ಪ	ನಿವೇಶನ ಜಾಗ	514.30	ಸ.ನಂ. 16 ರ ಉಳಿಕೆ ಜಾಗ	ಸ.ನಂ. 14	ಸ.ನಂ. 15/1	ಹಳ್ಳ
					ನಿವೇಶನ ಜಾಗ	288.75	ಹಳ್ಳ	ಸ.ನಂ. 16 ರ ಉಳಿದ ಜಾಗ	ಸ.ನಂ. 16 ರ ಉಳಿದ ಜಾಗ ಮತ್ತು ಸ.ನಂ. 15/1	ಹಳ್ಳ
					ಒಟ್ಟು	**1588=81 ಚ.ಮೀ**				

ಚಿಕ್ಕಮುನಿಯಪ್ಪ
ಉಪ ಆಯುಕ್ತರು (ಭೂಸ್ವಾಧೀನ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಿ.ಡಿ. 10